ದಿನಾಂಕ 27-02-2026 ರಂದು ಸಾಕ್ಷಿಗೆ ಪ್ರಮಾಣ ವಚನ  ಬೋಧಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ  ಪರವಾಗಿ ಶ್ರೀ ಬಿ.ಜಿ.ಎ ವಕೀಲರವರಿಂದಃ**

ನಿಮ್ಮ ಉದ್ಯೋಗ ಏನು ಎಂದರೆ ಮಣಿಪಾಲದಲ್ಲಿ ಟೆಸ್ಟ್ ಪ್ಲೆಮ್ ಪ್ರೈವೇಟ್ ಲಿಮಿಟೆಡ್ ನಲ್ಲಿ ಪರೀಕ್ಷೆಗೆ ಸರಬರಾಜು ಮಾಡುವ ಉತ್ತರ ಪತ್ರಿಕೆಗಳ ಗುಣಮಟ್ಟವನ್ನು ಪರೀಕ್ಷೆ ಮಾಡುವ ಕೆಲಸವನ್ನು ಮಾಡುತ್ತಿದ್ದೆನು. ಆ ವೇಳೆ ನಿಮಗೆ ಎಷ್ಟು  ಸಂಬಳ ಇತ್ತು ಎಂದರೆ  ತಿಂಗಳಿಗೆ 35 ಸಾವಿರ ರೂಪಾಯಿಗಳು ಇತ್ತು. ನಿಮ್ಮ ಸಂಬಳದ ಬಗ್ಗೆ ನಿಮ್ಮ ಗೌರವಾನ್ವಿತ ವಕೀಲರಿಗೆ ಮಾಹಿತಿಯನ್ನು ನೀಡಿರುತ್ತೀರಾ ಎಂದರೆ ಹೌದು. ನಿಮ್ಮ ಸಂಬಳ ಬಗ್ಗೆ ದಾಖಲೆಯನ್ನು ನೀಡಿರುತ್ತೀರಾ ಎಂದರೆ ಹೌದು.  ಮೆಕ್ಯಾನಿಕಲ್ ಇಂಜಿನಿಯರಿಂಗ್‌ನಲ್ಲಿ ಡಿಪ್ಲೋಮಾ ಮಾಡಿರುತ್ತೇನೆಂದು ತೋರಿಸಲು ದಾಖಲೆಯನ್ನು ತೋರಿಸಿರುತ್ತೀರ ಎಂದರೆ ಹೌದು.  ನೀವು ಮಾಡುತ್ತಿದ್ದೆನು ಎಂದು ಹೇಳುವ ಕೆಲಸಕ್ಕೂ ನಿಮ್ಮ ಪದವಿಗೂ ಸಂಬಂದ ಇಲ್ಲ ಎಂದರೆ ಸಂಬಂದವಿದೆ. ಅಪಘಾತದಿಂದ ಆಗಿದೆ ಎಂದು ಹೇಳುವ ಗಾಯಗಳ ಚಿಕಿತ್ಸೆಗೆ ಎಷ್ಟು  ದಿನ ಒಳ ರೋಗಿಯಾಗಿ ಚಿಕಿತ್ಸೆ  ಪಡೆದಿರುತ್ತೀರಿ ಎಂದರೆ ಒಂದು ವಾರ ಪಡೆದಿರುತ್ತೇನೆ. ನೀವು ಆಸ್ಪತ್ರೆಯಲ್ಲಿ ಇರುವ ಕಾಲದಲ್ಲಿ ನಿಮ್ಮನ್ನು ನೋಡಿಕೊಳ್ಳಲು ಯಾರು ಇದ್ದರು  ಎಂದರೆ ನಮ್ಮ ತಾಯಿಯವರು ಇದ್ದರು.

ಅಪಘಾತ ದಿಂದ ನಿಮಗೆ ಎಲ್ಲಿ ಪೆಟ್ಟು ಆಗಿರುತ್ತದೆ ಎಂದರೆ ತಲೆಗೆ ಗಾಯವಾಗಿದೆ. ಬೇರೆ ಯಾವುದಾದರೂ ಗಾಯಗಳು ಆಗಿತ್ತೇ ಎಂದರೆ ಆಗಿರಲಿಲ್ಲ. ನಿಮಗೆ ಈಗ ಯಾವುದೇ ಚಿಕಿತ್ಸೆಯ ಅಗತ್ಯ ವಿಲ್ಲ ಎಂದರೆ ಚಿಕಿತ್ಸೆಯ ಅಗತ್ಯವಿಲ್ಲ,  ಆದರೆ ಔಷಧಿ ತೆಗೆದುಕೊಳ್ಳುತ್ತಿದ್ದೇನೆ. ನಿಮಗೆ ಆಗಿದೆ ಎಂದು ಹೇಳುವ ಗಾಯಗಳಿಂದ ನಿಮ್ಮ ಕೆಲಸಕ್ಕೆ ಯಾವುದೇ ತೊಂದರೆ ಆಗುತ್ತಿಲ್ಲ ಎಂದರೆ ಆಗುತ್ತಿದೆ.

ಅಪಘಾತವಾಗಿದೆ ಎಂದು ಹೇಳುವ ಕಾಲದಲ್ಲಿ ನಿಮ್ಮ ಬಳಿ ಡಿ.ಎಲ್ ಇತ್ತೇ ಎಂದರೆ ಹೌದು. ಅದನ್ನು ಈಗಾಗಲೇ ಹಾಜರು ಮಾಡಿರುತ್ತೇನೆ. ಆ ವೇಳೆ ಎಷ್ಟು ವೇಗದಲ್ಲಿ ನಿಮ್ಮ ವಾಹನ ಚಾಲನೆಯಾಗುತ್ತಿತ್ತು ಎಂದರೆ ಸುಮಾರು 30 ಕಿ. ಮೀ ವೇಗದಲ್ಲಿತ್ತು .

ಅಪಘಾತವು ನಿಮ್ಮ ತಪ್ಪಿನಿಂದಲೇ ಆಗಿರುತ್ತದೆ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಬಿಲ್ಲುಗಳನ್ನು ನೀವೇ ಸೃಷ್ಟಿ ಮಾಡಿ ಹಾಜರು ಪಡಿಸಿರುವುದು ಎಂದರೆ ಸರಿಯಲ್ಲ. ನೀವು ಹೇಳಿರುವಷ್ಟು ಪ್ರಮಾಣದ ಹಣವು ಚಿಕಿತ್ಸೆ ಗಾಗಿ ಖರ್ಚು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತವು ನಿಮ್ಮ ತಪ್ಪಿ ನಿಂದಲೇ ಆಗಿರುವುದರಿಂದ 2 ನೇ ಎದ್ರುದಾರರು ಪರಿಹಾರದ ಹಣವನ್ನು ತುಂಬಿ ಕೊಡಲು ಬಾಧ್ಯಸ್ಥರಲ್ಲವೆಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಎದುರುದಾರರ ಪರವಾಗಿ ಶ್ರೀ ಡಿ.ಬಿ.ಎಸ್ ವಕೀಲರವರಿಂದಃ**

2 ನೇ ಎದುರುದಾರರ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ 1 ನೇ ಎದುರುದಾರರ ಪರ ಪಾಟೀ ಸವಾಲಾಗಿ ಅಳವಡಿಸಿಕೊಳ್ಳಬೇಕೆಂದು ಮನವಿ ಮಾಡಿರುತ್ತಾರೆ. ಮನವಿಯನ್ನು ಅಂಗೀಕರಿಸಲಾಯಿತು.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ ಮತ್ತು ಎಂ.ಎ.ಸಿ.ಟಿ. ಉಡುಪಿ.